# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲ್ಯು: 1 / ಪಿಡಬ್ಲ್ಯು: 1

ದಿನಾಂಕ: 17.08.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾರವ್ವ ನಾಯಕ |
| ಗಂಡನ ಹೆಸರು | : | ಸೋಮಲೆಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಹತ್ತಿಕಟ್ಟಿ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನನಗೆ ಚಾಸಾ-10 ರಿಂದ 13, 15 ರವರ ನಮ್ಮ ಊರಿನವರು ಇರುತ್ತಾರೆ. ಚಾಸಾ-14 ನಮ್ಮ ಸಂಬಂಧಿಕರು ಇರುತ್ತಾರೆ. ಚಾಸಾ-16 ಮತ್ತು 17 ರವರು ನನ್ನ ಮೈದುನರು ಇರುತ್ತಾರೆ.

2. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನಮ್ಮ ತಾಂಡಾದವರು ಇರುತ್ತಾರೆ ಮತ್ತು ಆತನೇ ನನ್ನ ಗಂಡನನ್ನು ಸಾಯಿಸಿರುತ್ತಾನೆ.

3. ಅತ್ತಿಕಟ್ಟಿ ಗ್ರಾಮದ ನಮ್ಮ ಮನೆಯಲ್ಲಿ ನಾನು, ನನ್ನ ಗಂಡ, ನನ್ನ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಕೂಡಿ ಇರುತ್ತಿದ್ದೆವು.

4. ನನ್ನ ಗಂಡನು ಹೊಲ ಮನೆ ಕೆಲಸ ಮಾಡಿಕೊಂಡು ಇರುತ್ತಿದ್ದನು ಮತ್ತು ಆತನು ನಮ್ಮ ತಾಂಡಾದ ನಾಯಕನಾಗಿ ಕೆಲಸ ಮಾಡುತ್ತಿದ್ದನು.

5. ಆರೋಪಿಗೆ ಮದುವೆಯಾಗಿದ್ದು, ಆತನಿಗೆ ಮಕ್ಕಳು ಇರುತ್ತಾರೆ. ಆರೋಪಿಯ ಹೆಂಡತಿಯು ಮನೆಗೆಲಸ ಮಾಡಿಕೊಂಡು ಇರುತ್ತಿದ್ದಳು. ಆರೋಪಿಯು ತನ್ನ ಹೆಂಡತಿಗೆ ಹೊಡೆ ಬಡೆ ಮಾಡಿದ್ದರಿಂದ, ಆಕೆಯು ತನ್ನ ಗಂಡನ ಮನೆಯನ್ನು ಬಿಟ್ಟು, ತನ್ನ ತವರು ಮನೆಯಾದ ಚಂದಾಪುರ ಗ್ರಾಮದಲ್ಲಿಯೇ ಇದ್ದಳು. ಈ ಕಾರಣಕ್ಕಾಗಿ, ಆರೋಪಿಯು ನನ್ನ ಗಂಡನಿಗೆ ನನ್ನ ಬಾಳ್ವೆ ಸರಿ ಮಾಡು ಎಂದು ಹೇಳುತ್ತಿದ್ದನು. ಅದಕ್ಕೆ ನನ್ನ ಗಂಡನು, ಊರು ಹಿರಿಯರು ಸೇರಿ ಸರಿ ಮಾಡುತ್ತೇವೆ ಎಂದು ಹೇಳಿದ್ದನು. ಈ ಕಾರಣಕ್ಕಾಗಿ ಆರೋಪಿಯು ನನ್ನ ಗಂಡನ ಮೇಲೆ ದ್ವೇಷ ಸಾಧಿಸುತ್ತಿದ್ದನು.

6. ದಿಃ 04.03.2022 ರಂದು, ರಾತ್ರಿ 08.00 ಗಂಟೆ ಸುಮಾರಿಗೆ, ನನ್ನ ಗಂಡನು ನಮ್ಮ ಮನೆಯಿಂದ ಸೇವಾ ಲಾಲ ದೇವಸ್ಥಾನದ ಉದ್ಘಾಟನೆ ವಿಷಯವಾಗಿ ಮಾತನಾಡಲು ಹಿರಿಯರು ಸೇರಿರುತ್ತಾರೆ ಎಂದು ಹೇಳಿ ಹೋಗಿರುತ್ತಾನೆ. ನಮ್ಮ ಮನೆಯಿಂದ ಸದರಿ ಸೇವಾಲಾಲ ದೇವಸ್ಥಾನವು 100 ಅಡಿ ದೂರದಲ್ಲಿ ಇರುತ್ತದೆ.

7. ಹಾಗೆ ನನ್ನ ಗಂಡನು ಹೋದ ಸ್ವಲ್ಪ ಹೊತ್ತಿನ ನಂತರ, ಚಾಸಾ-14 ರವರು ನಮ್ಮ ಮನೆಗೆ ಬಂದು, ಸೇವಾಲಾಲ ಗುಡಿಯಲ್ಲಿ ನನ್ನ ಗಂಡನಿಗೆ ಆರೋಪಿ ಚಾಕುವಿನಿಂದ ಚುಚ್ಚಿರುತ್ತಾನೆ ಎಂದು ಹೇಳಿರುತ್ತಾನೆ. ಆಗ ನಾನು ಮತ್ತು ಚಾಸಾ-14 ರವರು ಸದರಿ ಸೇವಾಲಾಲ ದೇವಸ್ಥಾನಕ್ಕೆ ಓಡಿ ಹೋಗಿರುತ್ತೇವೆ. ಆಗ ಸದರಿ ದೇವಸ್ಥಾನದಲ್ಲಿ ನನ್ನ ಗಂಡನು ಡಬ್ಬಾಗಿ ಬಿದ್ದಿದ್ದನು ಮತ್ತು ರಕ್ತ ಚೆಲ್ಲಾಡಿತ್ತು. ನಾನು ನನ್ನ ಗಂಡನನ್ನು ನನ್ನ ತೊಡೆಯ ಮೇಲೆ ಹಾಕಿಕೊಂಡು ಆತನನ್ನು ನೋಡಲಾಗಿ, ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು ಮತ್ತು ಅತನು ಮಾತನಾಡಲಿಲ್ಲ ಮತ್ತು ಆತನ ಹೊಟ್ಟೆಗೆ, ಹೊಕ್ಕಳಕ್ಕೆ, ಗದ್ದಕ್ಕೆ, ಮೊಣಕೈಗೆ, ಎದೆಗೆ, ಹೊಟ್ಟೆಗೆ, ಎಡಗೈಗೆ ಚಾಕುವಿನಿಂದ ಚುಚ್ಚಿದ ಗಾಯಗಳಾಗಿದ್ದವು.

8. ಅಲ್ಲಿ ನಮ್ಮ ತಾಂಡಾದ ಹಿರಿಯರಾದ ಚಾಸಾ-10, 11, 13, 12 ಸಹ ಇದ್ದರು. ಆಗ ನಾನು ಚಾಸಾ-10 ರವರಿಗೆ ನನ್ನ ಗಂಡನಿಗೆ ಹೀಗೇಕಾಯಿತು ಎಂದು ಕೇಳಿರುತ್ತೇನೆ. ಆಗ ಚಾಸಾ-10 ರವರು, ನಾವೆಲ್ಲಾ 5 ಜನರಾದ ತಾನು, 11, 13, 12 ಹಾಗೂ ಮೃತನು ಸೇರಿ ದೇವಸ್ಥಾನದ ಉದ್ಘಾಟನೆ ಬಗ್ಗೆ ಮಾತನಾಡುತ್ತಿದ್ದಾಗ, ಆರೋಪಿ ಅಲ್ಲಿಗೆ ಬಂದು, ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ನನ್ನ ಗಂಡನಿಗೆ ಭೋಸಡಿ ಮಗನೆ ನನ್ನ ಬಾಳ್ವೆ ಸರಿ ಪಡಿಸಿಲ್ಲ, ಗುಡಿ ಬಗ್ಗೆ ಮಾತಾಡಾಕತ್ತೀಯಾ ಎಂದು ಬೈದಾಡಿರುತ್ತಾನೆ, ಆಗ ನಾವೆಲ್ಲಾ ಆರೋಪಿಗೆ ಹೀಗೇಕೆ ಬೈದಾಡುತ್ತೀಯಾ ಎಂದು ಕೇಳಿರುತ್ತೇವೆ, ಆಗ ಆರೋಪಿಯು ಸದರಿ ದೇವಸ್ಥಾನದ ಕಂಬಕ್ಕೆ ಕುಳಿತುಕೊಂಡಿದ್ದ ನನ್ನ ಗಂಡನ ಎದೆಗೆ ಜೋರಾಗಿ ಒದ್ದಿರುತ್ತಾನೆ, ಆಗ ನಾವೆಲ್ಲಾ ಆರೋಪಿಗೆ ಹೀಗೇಕೆ ಮಾಡುತ್ತೀಯಾ ಎಂದು ಕೇಳಿದಾಗ, ಆರೋಪಿಯು ಚಾಕುವಿನಿಂದ ನನ್ನ ಗಂಡನ ಹೊಟ್ಟೆಗೆ, ಹೊಕ್ಕಳಕ್ಕೆ, ಗದ್ದಕ್ಕೆ, ಮೊಣಕೈಗೆ, ಎದೆಗೆ, ಹೊಟ್ಟೆಗೆ, ಎಡಗೈಗೆ ಚುಚ್ಚಿರುತ್ತಾನೆ ಮತ್ತು ನಾವು ಆರೋಪಿಯನ್ನು ಹಿಡಿದುಕೊಳ್ಳುವಷ್ಟರಲ್ಲಿ ಆತ ಓಡಿ ಹೋಗಿರುತ್ತಾನೆ ಎಂದು ಹೇಳಿರುತ್ತಾರೆ. ಆರೋಪಿ ನನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿದಾಗ, ಸಮಯ ರಾತ್ರಿ 08.30 ಗಂಟೆಯಾಗಿತ್ತು.

9. ನಂತರ, ನಾನು, ಚಾಸಾ-14, ಚಾಸಾ-9 ರವರು ಸೇರಿ ನನ್ನ ಗಂಡನನ್ನು ಒಂದು ಖಾಸಗಿ ವಾಹನದಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಆಗ ವೈದ್ಯರು ನನ್ನ ಗಂಡನನ್ನು ಪರೀಕ್ಷೆ ಮಾಡಿ, ಆತ ಮೃತಪಟ್ಟಿರುತ್ತಾನೆ ಎಂದು ಹೇಳಿರುತ್ತಾರೆ. ಆಗ ಸಮಯ, ರಾತ್ರಿ 09.40 ಗಂಟೆಯಾಗಿತ್ತು.

10. ಈ ಬಗ್ಗೆ ನಾನು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಾನು ಹೇಳಿದಂತೆ, ಚಾಸಾ-13 ರವರು ಬರೆದಿರುತ್ತಾರೆ. ಈಗ ತೋರಿಸಿದ ದೂರಿನ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಇರುತ್ತದೆ. **ಸದರಿ ದೂರನ್ನು** ನಿಪಿ-**1** **ಎಂದು ಗುರುತಿಸಲಾಯಿತು**. ನಾನು ದೂರನ್ನು ಕೊಟ್ಟಾಗ, ಸಮಯ ಮಧ್ಯ ರಾತ್ರಿ 01.30 ಗಂಟೆಯಾಗಿತ್ತು.

11. ಆರೋಪಿಯು ನನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿದ ನಂತರ ಸದರಿ ಚಾಕುವನ್ನು ತಾನೇ ತೆಗೆದುಕೊಂಡು ಓಡಿ ಹೋಗಿರುತ್ತಾನೆ. ಆರೋಪಿ ಆ ದಿನ ಇನ್ನೊಂದು ಚಾಕುವನ್ನು ತನ್ನ ಸೊಂಟದಲ್ಲಿ ಇಟ್ಟುಕೊಂಡಿದ್ದು, ಅದನ್ನು ಚಾಸಾ-13 ರವರು ಆರೋಪಿಯಿಂದ ಕಸಿದುಕೊಂಡು ಪೋಲೀಸರಿಗೆ ಕೊಟ್ಟಿರುತ್ತಾರೆ. ಸದರಿ ಚಾಕುವನ್ನು ಚಾಸಾ-13 ರವರು ಪೋಲೀಸರಿಗೆ ಕೊಡುವುದನ್ನು ನಾನು ನೋಡಿರುತ್ತೇನೆ.

12. ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಚೀಲಕ್ಕೆ ಗಂಟು ಹಾಕಿದ್ದನ್ನು ಬಿಚ್ಚಿ, ಅದರಲ್ಲಿದ್ದ ಕಟ್ಟಿಗೆ ಹಿಡಿಕೆ ಇರುವ ಕಬ್ಬಿಣದ ಅಲಗು ಇರುವ ಚೂಪಾದ ಚೂರಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ಗುರುತಿಸಿದ್ದು, ಸದರಿ ಚಾಕುವನ್ನು ಮು.ಮಾ.1 ಎಂದು ಗುರುತಿಸಲಾಯಿತು. ಮು.ಮಾ.1 ಕ್ಕೆ ಚೂರಿ ಎಂದು ಕೂಡಾ ಕರೆಯುತ್ತಾರೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ.**

13. ಘಟನೆ ದಿನ ನನ್ನ ಗಂಡನು ಬನಿಯನ, ಲುಂಗಿ ಮತ್ತು ಚಡ್ಡಿಯನ್ನು ಧರಿಸಿದ್ದನು ಮತ್ತು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದಲ್ಲಿ ಕಾಗದದಲ್ಲಿ ಸುತ್ತಿ ಸೀಲ್ ಮಾಡಿದ್ದನ್ನು ಬಿಚ್ಚಿ, ಅದರಲ್ಲಿದ್ದ ಅಲ್ಲಲ್ಲಿ ರಕ್ತ ಹತ್ತಿದ ಒಂದು ಕತ್ತರಿಸಿ ತೆಗೆದ ಫುಲ್ ತೋಳಿನ ಬನಿಯನನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದು ತನ್ನ ಗಂಡನದು ಎಂದು ಗುರುತಿಸಿದ್ದು, ಸದರಿ ಬನಿಯನನ್ನು ಮು.ಮಾ.2 ಎಂದು ಗುರುತಿಸಲಾಯಿತು.**

**14. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದಲ್ಲಿ ಕಾಗದದಲ್ಲಿ ಸುತ್ತಿ ಸೀಲ್ ಮಾಡಿದ್ದನ್ನು ಬಿಚ್ಚಿ, ಅದರಲ್ಲಿದ್ದ ಅಲ್ಲಲ್ಲಿ ರಕ್ತ ಹತ್ತಿದ ಒಂದು ಪಟ್ಟಾಪಟ್ಟಿಯ (ಗೀರು ಗೀರಿನ) ಚಡ್ಡಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದು ತನ್ನ ಗಂಡನದು ಎಂದು ಗುರುತಿಸಿದ್ದು, ಸದರಿ ಚಡ್ಡಿಯನ್ನು ಮು.ಮಾ.3 ಎಂದು ಗುರುತಿಸಲಾಯಿತು.**

**15. ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದಲ್ಲಿ ಕಾಗದದಲ್ಲಿ ಸುತ್ತಿ ಸೀಲ್ ಮಾಡಿದ್ದನ್ನು ಬಿಚ್ಚಿ, ಅದರಲ್ಲಿದ್ದ ಅಲ್ಲಲ್ಲಿ ರಕ್ತ ಹತ್ತಿದ ಒಂದು ಬಿಳಿ ಬಣ್ಣದ ಲುಂಗಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದು ತನ್ನ ಗಂಡನದು ಎಂದು ಗುರುತಿಸಿದ್ದು, ಸದರಿ ಲುಂಗಿಯನ್ನು ಮು.ಮಾ.4 ಎಂದು ಗುರುತಿಸಲಾಯಿತು.**

16. ಈಗ ತೋರಿಸಿದ ಫೋಟೋದಲ್ಲಿ ಸದರಿ ಸೇವಾಲಾಲ ದೇವಸ್ಥಾನದ ಭಾವಚಿತ್ರ ಇರುತ್ತದೆ. ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೋದಲ್ಲಿ ಆರೋಪಿಯು ನನ್ನ ಗಂಡನಿಗೆ ಚೂರಿ ಚುಚ್ಚಿದ ಸ್ಥಳದ ಭಾವಚಿತ್ರ ಇರುತ್ತದೆ. ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು.

17. ನನ್ನ ಗಂಡನ ಸಾವಿಗೆ ಆರೋಪಿಯೇ ಕಾರಣನಾಗಿರುತ್ತಾನೆ. ಆರೋಪಿಯು ನನ್ನ ಗಂಡನಿಗೆ ನನ್ನ ಬಾಳ್ವೆ ಸರಿ ಮಾಡದೇ, ಬೇರೆಯವರ ಕಾರ್ಯಕ್ರಮಗಳಿಗೆ ಯಾಕೆ ಹೋಗುತ್ತೀ ಎಂದು ಅವಾಚ್ಯವಾಗಿ ಬೈದಾಡುತ್ತಿದ್ದನು. ಆರೋಪಿಯು ಚೂರಿಯಿಂದ ನನ್ನ ಗಂಡನಿಗೆ ಚುಚ್ಚಿ ಕೊಲೆ ಮಾಡಿರುತ್ತಾನೆ.

**<u>ಪಾಟಿ ಸವಾಲುಃ ಶ್ರೀ ಎಂ.ಹೆಚ್. ಭಜಂತ್ರಿ, ಆರೋಪಿ ಪರ ವಕೀಲರಿಂದಃ</u>**

**(ವಕೀಲರು, ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಕಾರಣಗಳು ಇಲ್ಲದೇ ಇರುವುದರಿಂದ ಅವರ ಪ್ರಾರ್ಥನೆಯನ್ನು ತಿರಸ್ಕರಿಸಿ, ಪಾಟಿ ಸವಾಲು ಏನೂ ಇರುವುದಿಲ್ಲ ಎಂದು ತೆಗೆದುಕೊಳಳಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 2 / ಪಿಡಬ್ಲು: 2

ದಿನಾಂಕ: 17.08.2024

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಹಾಲಪ್ಪ ಚವ್ಹಾಣ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅತ್ತಿಕಟ್ಟಿ ತಾಂಡಾ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಈಗ ತೋರಿಸಿದ ಗುನ್ನಾ ಜಾಗೆ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

2. ಈಗ ಸುಮಾರು 2 ವರ್ಷಗಳ ಹಿಂದೆ, ಮುಂಡರಗಿ ಪೋಲೀಸರು ನಮ್ಮ ಊರಿನ ಸೇವಾಲಾಲ ದೇವಸ್ಥಾನಕ್ಕೆ ಬಂದಾಗ, ಅಲ್ಲಿ ನನ್ನ ಸಹಿಯನ್ನು ನಿಪಿ-4 ಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಸೇವಾಲಾಲ ದೇವಸ್ಥಾನದಲ್ಲಿ ಸೋಮಲೆಪ್ಪ ನಾಯಕ ಇವರ ಕೊಲೆಯಾಗಿತ್ತು. ಸದರಿ ಸೋಮಲೆಪ್ಪ ಇವರನ್ನು ಚಾಕುವಿನಿಂದ ಚುಚ್ಚಿ ಕೊಲೆ ಮಾಡಲಾಗಿತ್ತು. ಕೊಲೆಯಾದ ಸ್ಥಳವನ್ನು ಚಾಸಾ-16 ರವರು ತೋರಿಸಿರುತ್ತಾರೆ. ಸ್ಥಳದಲ್ಲಿ ರಕ್ತ ಬಿದ್ದು, ಒಣಗಿತ್ತು. ಅಲ್ಲಿ ಪೋಲೀಸರು ಒಣಗಿದ ರಕ್ತವನ್ನು ಕೆದರಿ ಡಬ್ಬಿಯಲ್ಲಿ ಹಾಕಿಕೊಂಡಿರುತ್ತಾರೆ. ಸದರಿ ಸ್ಥಳದಲ್ಲಿ ನಿಪಿ-4 ಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-4 ನ್ನು ಪೋಲೀಸ ಠಾಣೆಯಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ಸದರಿ ಸೇವಾಲಾಲ ದೇವಸ್ಥಾನದಲ್ಲಿ ಬರೆದಿರುತ್ತಾರೆ. ಪಂಚನಾಮೆಯನ್ನು ಬೆಳಗಿನ ಸಮಯದಲ್ಲಿ ಒಂದು ತಾಸಿನವರೆಗೆ ಮಾಡಿರುತ್ತಾರೆ.

3. ಆ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ಈಗ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ನಿಪಿ-2

ಮತ್ತು 3 ರಲ್ಲಿ ಕ್ರಮ ಸಂಖ್ಯೆ: 4 ರಲ್ಲಿ ನನ್ನ ಭಾವಚಿತ್ರ ಇರುತ್ತದೆ. ನಿಪಿ-3 ದೇವಸ್ಥಾನದಲ್ಲಿರುವ ಕಂಬದ ಫೋಟೋವಾಗಿದ್ದು, ಅಲ್ಲಿ ರಕ್ತ ಬಿದ್ದಿದ್ದ ಗುನ್ಹಾ ಸ್ಥಳವಾಗಿರುತ್ತದೆ.

4. ಪೋಲೀಸರು ವಶಪಡಿಸಿಕೊಂಡ ಒಣಗಿದ ರಕ್ತವನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ, ಕಾಗದದ ಕವರಿನಲ್ಲಿ ಹಾಕಿ ಸೀಲ್ ಮಾಡಿದ್ದನ್ನು ಬಿಚ್ಚಿ, ಅದರಲ್ಲಿದ್ದ ಜಿಪ್ ಇರುವ ಪ್ಲಾಸ್ಟಿಕ ಪಾಕೀಟಿನಲ್ಲಿ ಸಂಗ್ರಹಿದ್ದ ಹತ್ತಿಯಲ್ಲಿ ಸಂಗ್ರಹಿಸಿದ ಒಣಗಿದ ರಕ್ತವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಅದು ಆ ದಿನ ಪೋಲೀಸರು ಸಂಗ್ರಹಿಸಿದ ಒಣಗಿದ ರಕ್ತ ಇರಬಹುದು ಎಂದು ಹೇಳಿರುತ್ತಾರೆ. ಆದ್ದರಿಂದ ಸದರಿ ಒಣಗಿದ ರಕ್ತವನ್ನು ಮು.ಮಾ.5 ಎಂದು ಗುರುತಿಸಲಾಯಿತು. ಮು.ಮಾ.5 ರ ಕವರಿನ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇದ್ದು, ಅದನ್ನು ಮು.ಮಾ.5(ಎ) ಎಂದು ಗುರುತಿಸಲಾಯಿತು.**

5. ಆ ದಿನ ನನ್ನ ಜೊತೆ ಚಾಸಾ-3 ರವರೂ ಕೂಡಾ ಪಂಚರಾಗಿ ಇದ್ದರು. ಚಾಸಾ-3 ರವರೂ ಕೂಡಾ ಮು.ಮಾ.5 ರ ಕವರಿನ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಹಿ ಮಾಡಿದ್ದಾರೆ.

6. ಪಂಚನಾಮೆಯ ಪೂರ್ವದಲ್ಲಿ, ಪೋಲೀಸರು ನನಗೆ ನೋಟೀಸನ್ನು ಕೊಟ್ಟಿದ್ದರು. ಸದರಿ ನೋಟೀಸಿಗೆ ನಾನು ಸಹಿ ಮಾಡಿದ್ದೆನು. **ಈಗ ತೋರಿಸಿದ ನೋಟೀಸ ಮೇಲೆ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.**

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

## ಪಾಟಿ ಸವಾಲುಃ ಪಿಪಿಯವರಿಂದಃ

7. ಆ ದಿನ ಪೋಲೀಸರು ಗುನ್ಹಾ ಸ್ಥಳದಿಂದ ಒಣಗಿದ ರಕ್ತವನ್ನು ಹತ್ತಿಯಿಂದ ತೆಗೆದು, ಜಿಪ್ ಇರುವ ಪ್ಲಾಸ್ಟಿಕ ಪಾಕೀಟಿನಲ್ಲಿ ಸಂಗ್ರಹಿಸಿರುತ್ತಾರೆ ಎಂದರೆ ಸರಿ.

## ಪಾಟಿ ಸವಾಲುಃ ಶ್ರೀ ಎಂ.ಹೆಚ್. ಭಜಂತ್ರಿ, ಆರೋಪಿ ಪರ ವಕೀಲರಿಂದಃ

8. ನಿಪಿ-5 ನ್ನು ಪಂಚನಾಮೆಗೆ ಸಾಕ್ಷಿಯಾಗಬೇಕೆಂದು ಮತ್ತು ನಂತರ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯವನ್ನು ನುಡಿಯಬೇಕೆಂದು ಕೊಟ್ಟಿದ್ದರು. ನಿಪಿ-5 ನ್ನು ಪಂಚನಾಮೆ ಮಾಡುವ ದಿನದಂದೇ ಕೊಡಲಾಗಿತ್ತು. ಪೋಲೀಸ ಠಾಣೆಯಲ್ಲಿ ನನ್ನ 4 – 5 ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಿಪಿ-4 ಕ್ಕೆ ನಾನು ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಚಾಸಾ-3 ರವರನ್ನೂ ಕೂಡಾ ಪೋಲೀಸ ಠಾಣೆಗೆ ಕರೆಸಲಾಗಿತ್ತು. ನಿಪಿ-4 ನ್ನು ನಮಗೆ ಓದಿ ಹೇಳಿರುವುದಿಲ್ಲ. ಗುನ್ಹಾ ಸ್ಥಳದಲ್ಲಿ ಯಾವ ಸಹಿ

ಪಡೆದುಕೊಂಡಿರುತ್ತಾರೆ ಮತ್ತು ಪೋಲೀಸ ಠಾಣೆಯಲ್ಲಿ ಯಾವ ಸಹಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ.

9. ನಿಪಿ-2 ಮತ್ತು 3 ತೆಗೆಯುವುದು ಇದೆ ಎಂದು ನನ್ನನ್ನು ಹಿರಿಯರು ಕರೆಸಿ ಅವುಗಳನ್ನು ತೆಗೆಸಿರುತ್ತಾರೆ. ಫೋಟೋ ತೆಗೆಯುವುದನ್ನು ಬಿಟ್ಟರೆ, ಬೇರೆ ವಿಷಯಗಳನ್ನು ನನಗೆ ಹೇಳಿರುವುದಿಲ್ಲ. ಫೋಟೋಗಳನ್ನು ಏಕೆ ತೆಗೆಸುತ್ತಿದ್ದೀರಿ ಎಂದು ನಾನು ಕೇಳಿರುವುದಿಲ್ಲ. ನಿಪಿ-3 ರಲ್ಲಿ ಬಿದ್ದಿರುವ ರಕ್ತವು ಯಾರ ರಕ್ತ ಎಂದು ನನಗೆ ತಿಳಿಸಿ ಹೇಳಿರುವುದಿಲ್ಲ. ಫೋಟೋಗಳನ್ನು ತೆಗೆಯುವಾಗ ಯಾವುದೇ ದಾಖಲಾತಿಯನ್ನು ತಯಾರಿಸಿರುವುದಿಲ್ಲ. ಒಣಗಿದ ರಕ್ತವನ್ನು ಕೆಬರುವಾಗ ನಾನು ಇದ್ದೆನು. ಅರಳಿಯನ್ನು ಯಾರು ತೆಗೆದುಕೊಂಡು ಬಂದರು ಮತ್ತು ಎಲ್ಲಿಂದ ತೆಗೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಅರಳಿಯನ್ನು ಯಾವುದಕ್ಕೆ ಉಪಯೋಗಿಸಿರುತ್ತಾರೆ ಎಂದರೆ ಸಾಕ್ಷಿಯು, ಗೆಬರಿದ್ದನ್ನು ನಾನು ನೋಡಿರುತ್ತೇನೆ ಎಂದು ಹೇಳಿರುತ್ತಾರೆ.

10. ಸಾಕ್ಷಿಗೆ ಮು.ಮಾ.5 ನ್ನು ತೋರಿಸಲಾಗಿ, ಅದು ಮೊದಲು ಕೆಂಪಗಿತ್ತು, ಈಗ ಕರ್‍ರಗೆ ಆಗಿರುತ್ತದೆ ಎಂದು ಹೇಳಿರುತ್ತಾರೆ. ಪೋಲೀಸರು ಆ ದಿನ ಬಿಳಿ ಡಬ್ಬಿಯಲ್ಲಿ ಒಣಗಿದ ರಕ್ತವನ್ನು ಸಂಗ್ರಹಿಸಿರುತ್ತಾರೆ, ನಾನು ಈ ದಿನ ಬಿಳಿ ಡಬ್ಬಿಯನ್ನು ನೋಡಿರುವುದಿಲ್ಲ. ಪೋಲೀಸರು ಡಬ್ಬಿಯನ್ನು ಪ್ಯಾಕ ಮಾಡಿ, ಸೀಲ್ ಮಾಡಿದ್ದನ್ನು ನಾನು ನೋಡಿರುವುದಿಲ್ಲ. ಮು.ಮಾ.5(ಎ) ನ್ನು ದೇವಸ್ಥಾನದಲ್ಲಿ ಮಾಡಿರುತ್ತೇನೆ. ಮು.ಮಾ.5(ಎ) ನ್ನು ಮಾಡಿದಾಗ, ಪ್ಯಾಕ ಮಾಡಲಾಗಿತ್ತೋ ಅಥವಾ ಇಲ್ಲವೋ ಎಂದು ನನಗೆ ಲಕ್ಷ್ಯ ಇರುವುದಿಲ್ಲ. ಮು.ಮಾ.5(ಎ) ನ್ನು ಯಾತಕ್ಕಾಗಿ ತೆಗೆದುಕೊಳ್ಳಲಾಗಿತ್ತು ಎಂದು ನನಗೆ ಹೇಳಿದ್ದಾರಾ ಎಂದರೆ ಸಾಕ್ಷಿಯು, ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಮು.ಮಾ.5(ಎ) ನ್ನು ನಾನು ಪೋಲೀಸ ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ.

11. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ಫೋಟೋಗಳನ್ನು ತೆಗೆಸಿದ್ದನ್ನು ಬಿಟ್ಟು ಬೇರೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**